ಶ್ರೀ ಎಂ. ನಾಗಪ್ಪ.—ಕೇಂದ್ರ ಸರ್ಕಾರದವರು ಮಾನ್ಯತೆ ಮಾಡಿದ ಹಿಂದೀ ಪರೀಕ್ಷೆಗಳನ್ನೇ ರಾಜ್ಯ ಸರ್ಕಾರದವರು ಮಾನ್ಯತೆ ಮಾಡಬೇಕೆಂದು ರೂಲ್ಸುಗಳೇನಾದರೂ ಇವೆಯೇ ?

ಶ್ರೀ ಕೆ. ವಿ. ಶಂಕರಗೌಡ.—ರೂಲ್ಸಗಳೇನೂ ಇಲ್ಲ. ಸಾಧಾರಣವಾಗಿ ಕೇಂದ್ರ ಸರ್ಕಾರದವರು ಮಾನ್ಯತೆ ಮಾಡಿದ್ದನ್ನು ನಾವು ಮಾನ್ಯತೆ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ರಾಜ್ಯ ಸರ್ಕಾರದವರು ಸಾಹಿತ್ಯ ಸುಧಾಕರ ಪರೀಕ್ಷೆಯನ್ನು ಮಾನ್ಯತೆ ಮಾಡುವುದಕ್ಕೆ ಏನು ಅಡ್ಡಿ ಆತಂಕಗಳು ಇವೆ ?

ಶ್ರೀ ಕೆ. ವಿ. ಶಂಕರಗೌಡ.—ಕೇಂದ್ರ ಸರ್ಕಾರದವರು ಅದನ್ನು ಮಾನ್ಯತೆ ಮಾಡದೇ ಇರುವುದರಿಂದ ನಾವು ಅದನ್ನು ಮಾನ್ಯತೆ ಮಾಡುವುದಕ್ಕೆ ಆಗಿಲ್ಲ.

Sri J. P. SARWESH.—Sir, Hindi is different from Hindustani; why it is included in this list ?

ಶ್ರೀ ಕೆ. ವಿ. ಶಂಕರಗೌಡ.—ಹಿಂದೂಸ್ಥಾನಿ ಬೇರೆ, ಹಿಂದಿಯೇ ಬೇರೆ.

Mr. SPEAKER.—I know recognition is a factor to be considered. That is different and it is a factor to be resolved.

ಶ್ರೀ ಎಂ. ನಾಗಪ್ಪ.—ಬೊಂಬಾಯಿ ಹಿಂದೀ ವಿದ್ಯಾಪೀಠದವರು ಉತ್ತಮ, ಭಾಷಾ ರತ್ನ ಇವುಗಳನ್ನು ನೀವು ರೆಕಗ್ನೈಜ್ ಮಾಡಿದ್ದೀರಿ, ಹಾಗಾದರೆ ಬೊಂಬಾಯಿ ವಿದ್ಯಾಪೀಠದವರು ಸಾಹಿತ್ಯ ಸುಧಾಕರ ಪರೀಕ್ಷೆಯನ್ನು ಮಾನ್ಯತೆ ಮಾಡಿದಮೇಲೆ ನೀವು ಇದನ್ನು ಮಾನ್ಯತೆ ಮಾಡುವುದಕ್ಕೆ ಸಾಧ್ಯ ವಿಲ್ಲವೇ ?

ಶ್ರೀ ಕೆ. ವಿ ಶಂಕರಗೌಡ.—ಕೇಂದ್ರ ಸರ್ಕಾರದವರು ಅದನ್ನು ಮಾನ್ಯತೆ ಮಾಡಿಲ್ಲ. ಅವರು ಅದನ್ನು ಏತಕ್ಕೆ ಮಾನ್ಯತೆ ಮಾಡಿಲಿಲ್ಲ ಎನ್ನುವ ಕಾರಣ ನನಗೆ ಗೊತ್ತಿಲ್ಲ

ಶ್ರೀ ಎಂ. ನಾಗಪ್ಪ.—ಭಾರತ ಸರ್ಕಾರದವರು ಅದನ್ನು ಮಾನ್ಯತೆ ಮಾಡದಿದ್ದರೆ, ನಾವು ಅದನ್ನು ಮಾನ್ಯತೆ ಮಾಡಕೂಡದು ಎಂದು ಏನಾದರೂ ಕಾನೂನು ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕಾನೂನೇನೂ ಇಲ್ಲ. ಅವರು ಮಾನ್ಯತೆ ಮಾಡಿದ್ದನ್ನು ನಾವು ಮಾನ್ಯತೆ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರಾಜ್ಯ ಸರ್ಕಾರದವರು ವಿವಿಧ ಹುದ್ದೆಗಳಿಗೆ ಉಪಾಧ್ಯಾಯರನ್ನು ಕೆಲಸಕ್ಕೆ ನೇಮಕ ಮಾಡುವಾಗ ಅವರಿಗೆ ಯಾವ ಯಾವ ಪರೀಕ್ಷೆಗಳು ಪಾಸಾಗಿರಬೇಕೆಂದು ನಿಯಮ ಮಾಡಿದ್ದೀರಿ, ಇಷ್ಟೋ ವೇಳೆ ಸರ್ಕಾರದವರು ಹಿಂದಿ ಬೋಧಕರು ಇಲ್ಲದೇ ಇರುವುದರಿಂದ ನಾವು ಅವರನ್ನು ನೇಮಕ ಮಾಡಲಿಲ್ಲ ಎಂದು ಉತ್ತರವನ್ನು ಹೇಳಿದ್ದೀರಿ, ಯಾವ ಹಿಂದಿ ಪರೀಕ್ಷೆ ಪಾಸಾದವರನ್ನು ಉಪಾಧ್ಯಾಯರ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಎರ್ಲಾ ಕಡೆಗಳಲ್ಲಿಯೂ ಹಿಂದಿ ಉಪಾಧ್ಯಾಯರು ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರೇನೋ ಅನೇಕ ಹಿಂದೀ ಪರೀಕ್ಷೆಗಳಿಗೆ ಮಾನ್ಯತೆ ಕೊಟ್ಟಿದ್ದಾರೆ. ಆದರೆ ಹಿಂದೀ ಪರೀಕ್ಷೆಗಳನ್ನು ಪಾಸುಮಾಡಬೇಕೆಂದು ಒತ್ತಾಯ ಮಾಡಕೂಡದು ಎಂದು ಹೇಳಿ ವಿದ್ಯಾರ್ಥಿಗಳು ಹಿಂದಿಗೆ ಮಾನ್ಯತೆ ಕೊಡುತ್ತಾ ಇಲ್ಲ. ಈ ಬಗ್ಗೆ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳು ಗಲಾಟೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಕಡೆ ಹಿಂದಿಗೆ ವಿರೋಧ ಇದೆ. ಆದರೆ ಎರ್ಲಾ ಕಡೆಯೂ ಇಲ್ಲ.

Construction of a Feeder Channel

12. Sri D. PARAMESHWARAPPA (Honnali).—

Will the Minister for Public Works be pleased to state :—

(*a*) whether there is any proposal to construct feeder channel from Tunga Anicut near Gajanoor to Sowlanga new tank in Honnali Taluk ;

(*b*) if so, the stage at which the matter stands at present ?

A.— Sri VEERENDRA PATIL (Minister for Public Works).—

(*a*) No.
(*b*) Does not arise.

Sri D. PARAMESHWARAPPA.—Is there any proposal before Government to raise this Tunga Anicut by 8 ft. ?

†Sri VEERENDRA PATIL.—Sir, there is a proposal to raise the level of Tunga anicut *i.e.*, we are just examining the possibility of impounding more water by fixing the crest gates; that is under investigation.

Sri D. PARAMESHWARAPPA.—If that proposal is going to materialise, will the Government think of constructing a feeder channel from Tunga anicut to Sowlang a tank to that it may irrigate more and more acres in Honnali taluk ?

Sri VEERENDRA PATIL.—From the study of the topo sheet, it is revealed that this tank which referred to by the hon. member is at a higher level and the level would not permit.

Mr. SPEAKER.—Question hour is over.

PANEL OF CHAIRMEN

Mr. SPEAKER.—I have an announcement to make. Under rule 9 of the Rules of Procedure and Conduct of Business in the Mysore Legislative Assembly the following members will form the panel of Chairmen for the current session :

Smt. Basavarajeswari
Sri S. D. Kothavale
Sri M. Nagappa
Sri K. M. Thammiah

2-00 P.M.

Members' Representation

ಶ್ರೀ ಪಿ. ವಿ. ಐತಾಳ (ನೂರತ್ಕರ್).—ರೂಲ್ 177 ಪ್ರಕಾರ ನಾನು ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೇನೆ, ಅದನ್ನು ಗಮನಕ್ಕೆ ತರುತ್ತೇನೆ.

Mr. SPEAKER.—The member will kindly read that rule.

Sri P. V. AITHALA.— " A member may, with the consent of the Speaker, raise a question..."

Mr. SPEAKER.—Has the member obtained the consent of the Speaker.

Sri P. V. AITHALA.—I am asking for it.